ಶ್ರೀ ಎಚ್. ಡಿ. ದೇವೇಗೌಡ.—ನಿನ್ನೆ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದರು, ನನಗೆ ರಡುದಿವಸ ಟೈಮ್ ಕೊಡಿ. ಬಿಜಾಪುರ ಮತ್ತು ರಾಯ್ಚೂರ ಇನ್ನು ಹಲವಾರು ಪ್ರದೇಶಗಳಲ್ಲಿ ಬರ ಗಾಲಕ್ಕೆ ಒಳಗಾಗಿರತಕ್ಕ ಪ್ರದೇಶಗಳಲ್ಲಿ ಪರಿಹಾರಕ್ರಮಗಳನ್ನು ಕೈಗೊಂಡಿರತಕ್ಕ ಬಗ್ಗೆ ವಿವರಣೆ ಕೊಡುತ್ತೇನೆ ಎಂದು.

Rise in Prices of Food Articles

ಶ್ರೀ ಕೆ. ಎಂ. ನಾಗಣ್ಣ.—ಮೊನ್ನೆಯ ದಿವಸ ಬೆಂಗಳೂರು ನಗರದಲ್ಲಿ ಆಹಾರ ಪದಾರ್ಥ ಗಳ ಬೆಲೆ ಬಹಳ ಹೆಚ್ಚಾಗಿದೆ ಎಂದು ಹೇಳಿದಾಗ ಮಾನ್ಯ ಆಹಾರ ಮಂತ್ರಿಯವರು, ನಮ್ಮಲ್ಲಿರುವ ದಾಸ್ತಾನನ್ನು ಬಡುಗಡೆ ಮಾಡಿ ಬೆಲೆ ಏರದಂತೆ ನೋಡಿಕೊಳ್ಳುತ್ತೇವೆ ಎಂದು ಹೇಳಿದರು. ಇವತ್ತು ಅಕ್ಕಿಯ ಬೆಲೆ ಕ್ವಿಂಟಲಿಗೆ 145 ರಿಂದ 165ರ ವರೆಗೆ ಏರಿದೆ. ಬೇಳೆಯು ಬೆಲೆ 140 ಇದ್ದದ್ದು 160ಕ್ಕೆ ಹೋಗಿದೆ. ಆದ್ದರಿಂದ ಸರ್ಕಾರದವರು ದಯವಿಟ್ಟು ಈ ಬೆಲೆಗಳು ಏರದಂತೆ ನೋಡಿ ಕೊಂಡು ಅದನ್ನು ಇಳಿಸುವುದಕ್ಕೆ ತಕ್ಕ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Rise in fees is Private Colleges in Karnatak University.

ಶ್ರೀ ಕೋಣಂದೂರು ಲಿಂಗಪ್ಪ.—ತಮಗೆ ಗೊತ್ತಿರುವ ಹಾಗೆ ಮೂರು ವಾರಗಳ ಹಿಂದೆ ಉತ್ತರ ಕರ್ನಾಟಕ ಭಾಗದ ಖಾಸಗೀ ಕಾಲೇಜುಗಳ ಅಧ್ಯಾಪಕರುಗಳಿಗೆ ಮ್ಯಾನೇಜ್‌ಮೆಂಟ ನವರು ಮಾಡುತ್ತಿರುವ ಅನ್ಯಾಯದ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳಿಸಿದ್ದೆ. ಅದರ ಬಗ್ಗೆ ತಾವು ಸ್ವಲ್ಪ ಹೇಳಬೇಕು.

ಅಧ್ಯಕ್ಷರು.—ಇವತ್ತು ನಾಲ್ಕು ಕಾಲ್ ಅಟೆನ್‌ಷನ್ ನೋಟೀಸುಗಳನ್ನು ತೆಗೆದುಕೊಂಡಿ ದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ನಾವು ಎರಡೂವರೆ ಗಂಟೆಯ ಕಾಲ ಚರ್ಚೆ ಮಾಡುವುದಕ್ಕೆ ಒಂದು ನೋಟೀಸ್ ಕಳಿಸಿದ್ದೇವೆ.

Affairs in Chicknaikanahalli

ಶ್ರೀ ಗಟ್ಟಿ ಚಂದ್ರಶೇಖರ್.—ಮೂರು ದಿವಸಗಳ ಹಿಂದೆ ಚಿಕ್ಕನಾಯಕನಹಳ್ಳಿಯಲ್ಲಿ ನಡೆದ ಸೇಲ್ಸ್‌ಟ್ಯಾಕ್ಸ್ ಗಲಾಟೆಯ ಬಗ್ಗೆ ಇಲ್ಲಿ ಹೇಳಿದ್ದೆ. ನಿನ್ನೆ ಮಾನ್ಯ ಅರ್ಥ ಸಚಿವರು ಇದರ ಬಗ್ಗೆ ಒಂದು ಹೇಳಿಕೆಯನ್ನು ಮೇಲ್ಮನೆಯಲ್ಲಿ ಕೊಟ್ಟಿದ್ದಾರೆ. ನಾನು ಇಲ್ಲಿ ಹೇಳಿರುವುದು ನಿರಾಧಾರವಾಗಿದೆ ಎಂದು ಅವರು ಅಲ್ಲಿ ಹೇಳಿದ್ದಾರೆ. ಅದು ಪೇಪರಿನಲ್ಲಿಯೂ ಬಂದಿದೆ. ನನಗೆ ಅಧಿಕಾರಿಗಳ ಮೇಲೆ ಏನೂ ದ್ವೇಷ ಇಲ್ಲ; ನಾನು ಅವರನ್ನು ನೋಡಿಯೂ ಇಲ್ಲ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ನಾನು ಸುಮಾರು 12 ದಿವಸಗಳ ಹಿಂದೆ ತಮಗೆ ಒಂದು ಗೊತ್ತುವಳಿ ಸೂಚನೆಯನ್ನು ಕಳುಹಿಸಿದ್ದೆ. ಅದರ ಬಗ್ಗೆ ಏನಾಯಿತು ?

ಅಧ್ಯಕ್ಷರು.—ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ಉತ್ತರ ಬರಲಿ.

ಶ್ರೀ ಎಸ್. ಬಂಗಾರಪ್ಪ.—ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ, ಈ ದೇಶಕ್ಕೆ ಸ್ವಾತಂತ್ರ್ಯ ಬಂದು 25 ವರ್ಷಗಳಾಗಿರುವಾಗ ಈಗ ಬೆಳ್ಳಿ ಹಬ್ಬದ ನಲುವಾಗಿ ರಾಜ್ಯ ಸರ್ಕಾರದವರು ಒಂದು ಸಮಿತಿಯನ್ನು ನೇಮಕಮಾಡಿದ್ದಾರೆ. ಅದರಲ್ಲಿ ವಿರೋಧಪಕ್ಷಗಳಿಗೆ ರೆಪ್ರಸೆಂಟೇಷನ್ ಇಲ್ಲ.

ಅಧ್ಯಕ್ಷರು.—ಆ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ತಾವು ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಅವರೇ ನಮಗೆ ಮಾಹಿತಿ ಕೊಡಲಿ. ಇದನ್ನು ಯಾವ ಆಧಾರದ ಮೇಲೆ ಮಾಡಿದ್ದಾರೆ? ಇದರಲ್ಲಿ ಏತಕ್ಕೋಸ್ಕರ ಡಿಸ್ಕ್ರಿಮಿನೇಷನ್? ಎಲ್ಲಾ ರಾಜಕೀಯ ಪಕ್ಷಗಳೊಡನೆ ಸೌಜನ್ಯದಿಂದ ಈ ಬಗ್ಗೆ ಅವರು ವಿಚಾರ ಮಾಡಬೇಕಾಗಿತ್ತು.

ಇನ್ನೊಂದು ವಿಷಯ. ಅತಿ ಮುಖ್ಯವಾದುದು. ಕ್ಷಾಮ ಪರಿಹಾರದ ಬಗ್ಗೆ ಸರ್ಕಾರದ ಇಂಗಿತ ಏನೆಂಬುದು ಗೊತ್ತಾಗಬೇಕಾಗಿದೆ. ಆದಕಾರಣ ದಯವಾಡಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಇನ್ನೂ ಮಂತ್ರಿಗಳು ವಿರೋಧಪಕ್ಷಗಳ ನಾಯಕರ ಜೊತೆಯಲ್ಲಿ ಈ ವಿಚಾರವಾಗಿ ವಾತನಾಡುವುದು ಒಳ್ಳೆಯದು. ಈ ವಿಚಾರದಲ್ಲಿ ರಾಜ್ಯ ಸರ್ಕಾರದವರು ಇದುವರೆಗೂ ಏಕೆ ಯೋಚನೆ ಮಾಡಲಿಲ್ಲ? ತಾವೇ ಸೇರಿಕೊಂಡಂತೆ ಆ ಕಮಿಟಿಯನ್ನು ರಚನೆ ಮಾಡಿದ್ದಾರೆ. ಬೇರೆ ಯಾವ ಪಕ್ಷಕ್ಕೂ ಅವಕಾಶವಿಲ್ಲ ಇದು ಎಲ್ಲಾ ಪಕ್ಷಗಳಿಗೂ ಸಂಬಂಧಪಟ್ಟ ಪ್ರಶ್ನೆ. ಇದನ್ನು ಮುಖ್ಯಮಂತ್ರಿಗಳು ಯಾವ ಆಧಾರದ ಮೇಲೆ ಮಾಡಿದ್ದಾರೆ. ಏಕೆ ಇವರು ಎಲ್ಲಾ ರಾಜಕೀಯ ಪಕ್ಷಗಳನ್ನು ಸೌಜನ್ಯದಿಂದ ಕಂಡಿಲ್ಲ, ಅವರಿಗೆ ತಕ್ಕ ಸ್ಥಾನಮಾನವನ್ನು ಕೊಟ್ಟಿಲ್ಲ. ಅದನ್ನು ದಯವಾಡಿ ಹೇಳಬೇಕು.

ಅಧ್ಯಕ್ಷರು.—ತಾವು ಹೇಳಿದ ತಕ್ಷಣವೇ ಅವರಿಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಎಲ್ಲಾ ಪಾರ್ಟಿಯವರು ಆ ಕಮಿಟಿಯಲ್ಲಿದ್ದಾರೆಯೇ? ನಾವು ಆ ಸಮಿತಿಯಲ್ಲಿರಬೇಕು. 25 ವರ್ಷಗಳ ಒಂದು ಬೆಳ್ಳಿ ಹಬ್ಬವನ್ನು ಆಚರಿಸುವಾಗ ನಾವೆಲ್ಲರೂ ಸಂತೋಷವಾಗಿರಬೇಕು. ಇದರಲ್ಲಿ ಮಡಿವಂತಿಕೆ ಏಕೆ ಇರಬೇಕು?

ಅಧ್ಯಕ್ಷರು.—ತಾವು ಹೇಳಿದ್ದಕ್ಕೂ ಮತ್ತು ಮಾನ್ಯ ಶ್ರೀ ಬಂಗಾರಪ್ಪನವರು ಹೇಳಿದ್ದಕ್ಕೂ ಏನೊಂದೂ ವ್ಯತ್ಯಾಸವಿಲ್ಲ.

ಶ್ರೀ ವಾಟಾಳ್ ನಾಗರಾಜ್—ಈ ವಿಚಾರಗಳನ್ನು ನಿಮ್ಮ ಹತ್ತಿರ ಹೇಳದೆ ನಾವು ಇನ್ನು ಯಾರ ಹತ್ತಿರ ಹೋಗಿ ಹೇಳುವುದು ತಾವು ಒಬ್ಬರೇ ನಮಗೆ ಇರುವವರು. ನೀವು ಅಧ್ಯಕ್ಷರಾಗಿ ಇರುವುದರಿಂದ ನಿಮ್ಮ ಹತ್ತಿರ ಹಾಗೂ ನಿಮ್ಮ ಮೂಲಕ ಸರ್ಕಾರದವರನ್ನು ಕೇಳುತ್ತಿದ್ದೇವೆ. ನಿಮ್ಮನ್ನು ಬಿಟ್ಟು ನಾವು ಅವರನ್ನು ಕೇಳುವಹಾಗೆ ಇಲ್ಲ. ಆದ್ದರಿಂದ ಮಾನ್ಯ ಶ್ರೀ ಹುಚ್ಚಮಾಸ್ತಿ ಗೌಡರ ಹೇಳಿಕೆಯಾದ ನಂತರ, ಇವರ ಬಗ್ಗೆ ಒಂದು ಅಂಶವನ್ನಾದರೂ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಯಾವಾಗ ಕೊಡುತ್ತಾರೆ?

ಶ್ರೀ ಡಿ. ದೇವರಾಜ್ ಅರಸ್.—ಇದರಲ್ಲಿ ಯಾವ ಒಂದು ದೊಡ್ಡ ಹೇಳಿಕೆಯನ್ನು ಕೊಡಬೇಕಾಗಿಲ್ಲ. ಅವರೆಲ್ಲರನ್ನೂ ಮುಂಚೆ ಆ ಕಮಿಟಿಯಲ್ಲಿ ಸೇರಿಸಬೇಕೆಂದು ಮಾಡುವುದಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಸಂತೋಷವಾಯಿತು.

Statement by the Minister for Revenue: *re*: Scarcity Conditions in the State

†ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಅಧ್ಯಕ್ಷರೇ ರಾಜ್ಯದ ನಾನಾ ಭಾಗಗಳಲ್ಲಿ ಇರತಕ್ಕ ಅಭಾವ ಪರಿಸ್ಥಿತಿ ಬಗ್ಗೆ ಮಾನ್ಯ ಸದಸ್ಯರುಗಳು ವಿವರಗಳು ಬೇಕೆಂದು ಹೇಳಿದ್ದಕ್ಕಾಗಿ ನಾನು ಒಂದು ಹೇಳಿಕೆಯನ್ನು ಇಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಬಿಜಾಪುರದಲ್ಲಿ ಒಟ್ಟು 35 ಲಕ್ಷ ಎಕರೆ ವ್ಯವಸಾಯ ಭೂಮಿಯಲ್ಲಿ ಸುಮಾರು 20 ಲಕ್ಷ ಎಕರೆ ಭೂಮಿ ರಾಬಿ ಬೆಳೆ ಬರತಕ್ಕದ್ದು. 15 ಲಕ್ಷ ಎಕರೆ ಖರೀಪ್ ಬರತಕ್ಕದ್ದು. 3 ಲಕ್ಷ 31 ಸಾವಿರ ಎಕರೆ ಮಾತ್ರ ಬಿತ್ತನೆಯಾಗಿದೆ. ಉಳಿದ ಭೂಮಿಯಲ್ಲಿ ಬಿತ್ತನೆಯಾಗಲಿಲ್ಲ. ಈಗ ಬಿತ್ತನೆ ಕಾಲ ಮುಗಿದುಹೋಗಿದೆ.